# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ
## ಹೂವಿನಹಡಗಲಿ
## ಅಸಲು ದಾವೆ ನಂ ಃ170-2015

**ಪಿಡಬ್ಲೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 25-10-2017 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ.ಎಸ್.ಎಮ್.ಎಸ್ ವಕೀಲರಿಂದಃ

ದಾವಾ ಆಸ್ತಿಯು ನನಗೆ ನನ್ನ ತಂದೆಯಿಂದ ಬಂದಿರುತ್ತದೆ. ದಾವಾ ಆಸ್ತಿಯ ಸರ್ವೇ ನಂಬರ್ 586ಬಿ/7 ಅಗಿರುತ್ತದೆ. ಅದು ಒಂದು ಎಕರೆ 40 ಸೆಂಟ್ಸ್ ಇರುತ್ತದೆ. ದಾವಾ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿರುತ್ತದೆ. ಪೂರ್ವಕ್ಕೆ ಸರ್ವೇ 586/6, ಪಶ್ಚಿಮಕ್ಕೆ ಸಾರ್ವಜನಿಕ ರಸ್ತೆ, ಉತ್ತರಕ್ಕೆ ನೆಪೋಲಿಯನ್ ಅವರ ಜಮೀನು ಮತ್ತು ದಕ್ಷಿಣಕ್ಕೆ ಸರ್ವೇ 584 ಮತ್ತು 585 ಇರುತ್ತವೆ. ನಮ್ಮ ಗ್ರಾಮದ ಚನ್ನಬಸವೇ ಗೌಡರು ನನಗೆ ಪರಿಚಯವಿರುತ್ತಾರೆ. ಈ ಹಿಂದೆ ನೆಪೋಲಿಯನ್ ಅವರು ಖರೀದಿಸಿದ ಆಸ್ತಿಯನ್ನು ನಾನು ನನ್ನ ಸಹೋದರ ನಜೀರ್ ಸಾಬ್ ಅವರು ಚನ್ನಬಸವನಗೌಡ ಅವರಿಗೆ ಮಾರಾಟಕ್ಕೆ ಕೊಟ್ಟಿರುತ್ತವೆ ಎಂದರೆ ಸರಿ. ಚನ್ನಬಸವನಗೌಡರು ನೆಪೋಲಿಯನ್ ರವರಿಗೆ ನೊಂದಾಯಿತ ಕ್ರಯಾ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನೆಪೋಲಿಯನ್ ಅವರು ಖರೀದಿ ಮಾಡಿದ ನಂತರ ಆ ಆಸ್ತಿಯಲ್ಲಿ ಕಾಂಪ್ಲೆಕ್ಸ್‌ಗಳನ್ನು ಕಟ್ಟಿಸಿಕೊಂಡು ವಾಸ ಮಾಡಿರುತ್ತಾರೆ ಎಂದರೆ ಅವರು ನನ್ನ ಜಾಗದಲ್ಲಿ ಕಾಂಪ್ಲೆಕ್ಸ್‌ಗಳನ್ನು ಕಟ್ಟಿರುತ್ತಾರೆ.

ಎರಡನೇ ಪ್ರತಿವಾದಿಯು ನನ್ನ ಅಸ್ತಿಯ ಯಾವ ಭಾಗದಲ್ಲಿ ಅತಿಕ್ರಮ ಮಾಡಿರುತ್ತಾರೆ ಎಂದರೆ ದಕ್ಷಿಣ ಭಾಗದಲ್ಲಿ ಒತ್ತುವರಿ ಮಾಡಿರುತ್ತಾರೆ. ಅವರು ದಕ್ಷಿಣ ಭಾಗದಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ನಾನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ನಬೀ ಸಾಬ್ ಅವರು ನನ್ನ ಅಣ್ಣನ ಮಗ. ನನಗೂ ಮತ್ತು ನಬೀ ಸಾಬ್ ರವರಿಗೂ ದಾವಾ ಆಸ್ತಿಗೆ ಸಂಬಂಧಿಸಿದಂತೆ ಒಂದು ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ, ದಾವಾ ಆಸ್ತಿಯನ್ನು ದಿಃ14-05-2012 ರಂದು ರೂ.6,50,000/- ಗಳಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ, ಅದೇ ದಿನದಂದು ಅವರು ರೂ.6,50,000/- ಹಣವನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ನಾನು ಅದೇ ದಿನ ಅವರಿಗೆ ಒಂದು ಕರಾರನ್ನು ಸಹ ಬರೆದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ, ಆ ಕರಾರು ನಡೆಯುವ ಸಮಯದಲ್ಲಿ ನಮ್ಮ ಗ್ರಾಮದ ಬಿ.ಹೇಮಪ್ಪ, ಹೆಚ್.ನಜೀರ್ ಸಾಬ್, ನಾಗರಾಜ ಬಿ. ಸುಬಾನ್ ಸಾಬ್, ಕಲಾರಿ ಖಾದರ್ ಸಾಹೇಬ್, ಎಸ್.ನಾಗರಾಜ, ಗಂಗಪ್ಪ ಮತ್ತು

ಕಾಶಿನಾಥರವರು ಹಾಜರಿದ್ದರು ಎಂದರೆ ಸರಿಯಲ್ಲ. ಈ ದಾಖಲಾತಿಯನ್ನು ಬಾವಿಹಳ್ಳಿ ನಿಂಗಪ್ಪ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ವಕಾಲತ್ತಿನಲ್ಲಿರುವ ಸಹಿಯನ್ನು ತೋರಿಸಲಾಗಿದ್ದು ಅದನ್ನು ನಾನು ನೋಡಿ ಗುರ್ತಿಸಿದ್ದರಿಂದ ಸದ್ರಿ ವಕಾಲತ್ತು ನಾಮವನ್ನು ನಿಡಿ-01 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಡಿ-01ಎ ಎಂದು ಗುರ್ತಿಸಲಾಯಿತು. ಅದೇ ರೀತಿ ನನಗೆ ಕ್ರಯಾ ಕರಾರು ಪತ್ರವನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ನನಗೆ ತೋರಿಸಲಾಗಿದ್ದು ಆ ಸಹಿಯು ನನ್ನದಾಗಿರುವುದಿಲ್ಲ. ಆದ್ದರಿಂದ ಆ ದಾಖಲಾತಿಯನ್ನು ಗುರ್ತಿಸಲಾಗಿರುವುದಿಲ್ಲ.

ಈ ಹಂತದಲ್ಲಿ ಪ್ರತಿವಾದಿಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಕೋರಿದ್ದರಿಂದ ಅನುಮತಿಯ ಮೇರೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.